ಕರ್ನಾಟಕ ವಿಧಾನಸಭೆ

ಶುಕ್ರವಾರ 9ನೇ ಜನವರಿ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-35 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು

(ಸದನದ ಬಾವಿಯಲ್ಲಿ ಬಿಜೆಪಿಯ ಸದಸ್ಯರು ಆಗಮಿಸಿದರು)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರೇ, ತಾವು ಧರಣಿಗೆ ಆಮೇಲೆ ಕುಳಿತುಕೊಳ್ಳಿ, ಮೊದಲು ಸಂತಾಪ ಸೂಚನೆ ಮುಗಿಯಲಿ, ಮಾಜಿ ಶಾಸಕರಾದ ದಿ: ಬೋರಯ್ಯನವರ ಸಂತಾಪ ಸೂಚನೆ ಮುಗಿಯಲಿ, ಮಿಕ್ಕಿದ್ದು ನಿಮಗೆ ಬಿಟ್ಟಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶ್ರೀ ಸಿ. ಬೋರಯ್ಯನವರ ಎಂ.ಎಲ್.ಸಿ ಅವಧಿ ಮೊನ್ನೆ 5ನೇ ತಾರೀಖಿಗೆ ಮುಗಿಯಿತು, ಅವರು ಪಾಪ ನಿನ್ನೆಯ ದಿವಸ ನಿಧನ ಹೊಂದಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಸಂತಾಪ ಸೂಚನೆ ಮುಗಿದ ನಂತರ ನಾವು ಧರಣಿ ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಅದು ನಿಮಗೆ ಸಂಬಂಧಪಟ್ಟಿದ್ದು, ಅದರ ಬಗ್ಗೆ ನಾನು ಏನು ನಿಮಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಮಗೆ ನಿಮ್ಮ ಸಹಕಾರ ಬೇಕು.

ಅಧ್ಯಕ್ಷರು : ನನಗೆ ನಿಮ್ಮ ಸಹಕಾರವೇ ಇಲ್ಲ, ನನ್ನ ಸಹಕಾರ ನಿಮಗೆ ಯಾವಾಗಲೂ ಇದ್ದೇ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏನು ನಿಮ್ಮ ಸಹಕಾರ ಸರ್, ಅವರ ಧರಣಿಗೆ?

ಅಧ್ಯಕ್ಷರು : ಧರಣಿಗೆ ಸ್ವೀಕರ್‌ರವರ ಸಹಕಾರ ಬೇಕಾಗುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶ್ರೀ ಲಕ್ಷ್ಮೀನಾರಾಯಣರವರಿಗೆ ನಾವು ಒಂದು ಕೋಟಿ ರೂ.ಗಳ ಕೆಲಸವನ್ನು ಕೊಟ್ಟರೂ ಸಹ ಅವರು ಧರಣಿಯನ್ನು ಮಾಡುತ್ತಾರೆ.

ಅಧ್ಯಕ್ಷರು : ಇವತ್ತಿನ ದಿವಸದ ಕಾರ್ಯಕ್ರಮದ ಪಟ್ಟಿಯಲ್ಲಿ ಮೊದಲನೆಯದಾಗಿ ಸಂತಾಪ ಸೂಚನೆ.

1) ಸಂತಾಪ ಸೂಚನೆ

ಶ್ರೀ ಸಿ. ಬೋರಯ್ಯ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಸಿ. ಬೋರಯ್ಯ ಅವರು 20ನೇ ಜೂನ್, 1927 ರಂದು ಇಟ್ಟಮಡು ಗ್ರಾಮದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು ರಾಮನಗರ ಭೂ ಅಭಿವೃದ್ಧಿ ಬ್ಯಾಂಕ್‌ನ ನಿರ್ದೇಶಕರಾಗಿ, ತಾಲ್ಲೂಕು ಅಭಿವೃದ್ಧಿ ಅಧ್ಯಕ್ಷರಾಗಿ, ಜನತಾಪಾರ್ಟಿ ಮತ್ತು ರೈತ ಸಂಘದ ಅಧ್ಯಕ್ಷರಾಗಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1998 ರಿಂದ 2004ರ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ

ಶ್ರೀಯುತರು 1983ರಲ್ಲಿ 7ನೇ ವಿಧಾನ ಸಭೆಗೆ ರಾಮನಗರ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 8ನೇ ಜನವರಿ, 2004ರಂದು ನಿಧನ ಹೊಂದಿದರು.

†**ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)** : ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಸಿ. ಬೋರಯ್ಯ ಅವರು 20ನೇ ಜೂನ್, 1927ರಂದು ಇಟ್ಟಮಡು ಗ್ರಾಮದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು ರಾಮನಗರ ಭೂ ಅಭಿವೃದ್ಧಿ ಬ್ಯಾಂಕ್‌ನ ನಿರ್ದೇಶಕರಾಗಿ, ತಾಲ್ಲೂಕು ಅಭಿವೃದ್ಧಿ ಅಧ್ಯಕ್ಷರಾಗಿ, ಜನತಾಪಾರ್ಟಿ ಮತ್ತು ರೈತ ಸಂಘದ ಅಧ್ಯಕ್ಷರಾಗಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1998 ರಿಂದ 2004ರ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀಯುತರು 1983ರಲ್ಲಿ 7ನೇ ವಿಧಾನಸಭೆಗೆ ರಾಮನಗರ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಬಿ. ಸೋಮಶೇಖರ : ಮಾನ್ಯ ಅಧ್ಯಕ್ಷರೆ, ತಾವು ಸಂತಾಪ ಸೂಚನೆಯನ್ನು ಓದಿದ್ದೀರಿ, ಮಾನ್ಯ ಸಚಿವರೂ ಕೂಡ ಅದನ್ನೇ ಓದುತ್ತಿದ್ದಾರೆ.

ಅಧ್ಯಕ್ಷರು : ಮೊದಲು ಇಂಟ್ರೊಡಕ್ಷನ್ ಮಾಡಿ, ಆ ಮೇಲೆ ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಬೋರಯ್ಯನವರು ಒಬ್ಬ ಹಿರಿಯ ಸದಸ್ಯರು. ಅವರು ರಾಮನಗರದವರು ಯಾವಾಗಲೂ ಕೂಡ ಅವರು ಡಿಬೇಟ್‌ನಲ್ಲಿ ಆಕ್ಟಿವ್ ಪಾರ್ಟಿಸಿಪೇಟ್ ಮಾಡದೇ ಹೋದರೂ ಕೂಡ ರೈತರ ಸಮಸ್ಯೆ ಬಗ್ಗೆ ಮತ್ತು ರೈತರ ಯಾವುದೇ ಒಂದು ಚಳುವಳಿಯಲ್ಲಿ ಹೆಚ್ಚಿನ ಒಂದು ಆಸಕ್ತಿಯನ್ನು ವಹಿಸಿ ಕೆಲಸವನ್ನು ಮಾಡುತ್ತಿದ್ದಂಥ ವ್ಯಕ್ತಿ. ಅದರಲ್ಲಿ ವಿಶೇಷವಾಗಿ ಮಾಜಿ ಪ್ರಧಾನಿಯವರ ಬೆಂಬಲಕ್ಕೆ ನಿಂತು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಂಥ ಒಬ್ಬ ವ್ಯಕ್ತಿ, ವಿಧಾನ ಪರಿಷತ್ತಿನಲ್ಲಿ ಅವರು ಎಂಟರ್ ಆಗಬೇಕಾದರೆ ಅಧ್ಯಕ್ಷರಿಗೆ ನಮಸ್ಕಾರ ಮಾಡಿ ಎರಡು ಕೈಗಳನ್ನು ಜೋಡಿಸಿ ನಮನ ಮಾಡಿ ಒಳಗಡೆ ಬರುತ್ತಿದ್ದಂಥ ಒಬ್ಬ ಸೌಜನ್ಯದ ವ್ಯಕ್ತಿ, ಅವರ ಅವಧಿ ಮುಗಿದಿದ್ದು 5ನೇ ತಾರೀಖು. ನನಗೆ ಗೊತ್ತಿಲ್ಲವೆಂದು ತಾವು ಹೇಳಬೇಡಿ. ಪಾಪ ಅವರು ನಿನ್ನೆಯ ದಿವಸ ನಿಧನವನ್ನು ಹೊಂದಿದ್ದಾರೆ, ಅವರ ನಿಧನದಿಂದ ಒಬ್ಬ ಸಜ್ಜನರನ್ನು ನಾವು ಕಳೆದುಕೊಂಡಂತಾಗಿದೆ ಅದೂ ಅಲ್ಲದೆ ರೈತರ ಸಮಸ್ಯೆಯನ್ನು ಅರ್ಥಮಾಡಿಕೊಂಡು ಅವರಿಗೆ ಬೆಂಬಲವನ್ನು ನೀಡುತ್ತಿದ್ದಂಥ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿರುತ್ತೇವೆ. ಆ ಪಕ್ಷ ಒಂದೇ ಅಲ್ಲ, ನಾವು ನಿಜವಾಗಿಯೂ ಒಬ್ಬ ರೈತ ಮುಖಂಡನನ್ನು ಕಳೆದುಕೊಂಡಿದ್ದೇವೆ. ಅವರು ರೈತರ ಸಮಸ್ಯೆಗಳಿಗೆ ಸ್ಪಂದಿಸತಕ್ಕಂತಹ ವ್ಯಕ್ತಿಯಾಗಿದ್ದರು. ಶ್ರೀಯುತರು ಇವತ್ತು ನಮ್ಮ ಜೊತೆಗಿಲ್ಲ. ಸರ್ಕಾರದ ಪರವಾಗಿ ಹಾಗೂ ನನ್ನ ಪರವಾಗಿ ಅವರ ಕುಟುಂಬಕ್ಕೆ ಏನು ಇವತ್ತು ಅತಿ ದುಃಖವಾಗಿದೆ, ಆ ದುಃಖವನ್ನು ಸಹಿಸತಕ್ಕಂತಹ ಶಕ್ತಿಯನ್ನು ಭಗವಂತನು ಕೊಡಲೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

†**ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ಮಾನ್ಯ ಬೋರಯ್ಯನವರು ನಿನ್ನೆ ದಿವಸ ನಿಧನರಾದಂತಹ ಸುದ್ದಿ ಬಂತು, ಶ್ರೀ ಬೋರಯ್ಯನವರು ಸಹಕಾರಿ ಧುರೀಣರಾಗಿದ್ದರು, ರೈತರ ಬಗ್ಗೆ ಕಳಕಳಿ ಇದ್ದಂತಹ ವ್ಯಕ್ತಿಯಾಗಿದ್ದರು. ಶ್ರೀಯುತರು 5ನೇ ತಾರೀಖು ಜನವರಿವರೆವಿಗೂ ವಿಧಾನಪರಿಷತ್ತಿನ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದರು, ಜನವರಿ 5ನೇ ತಾರೀಖು ಅವರು ನಿವೃತ್ತಿಯನ್ನು ಹೊಂದಿದ್ದರು, ಇದಾದ ನಂತರ ಅವರು ನಿಧನರಾಗಿರುವುದು

ನಮ್ಮೆಲ್ಲರಿಗೂ ಆಘಾತವನ್ನು ತಂದಿರುವುದು. ಅವರು ಸೌಜನ್ಯದ ಮತ್ತು ಸರಳ ಜೀವಿಯಾಗಿದ್ದರು. ರೈತರ ಬಗ್ಗೆ ಕಳಕಳಿಯಿದ್ದಂತಹವರು ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಇವತ್ತು ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ, ಇದಕ್ಕೆ ನಾನು ನನ್ನ ಬೆಂಬಲವನ್ನು ವ್ಯಕ್ತಪಡಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಶ್ರೀಯುತ ಬೋರಯ್ಯನವರು ಪ್ರಥಮಬಾರಿಗೆ ಜನತಾಪಕ್ಷದ ಒಬ್ಬ ಶಾಸಕರಾಗಿ ನಮ್ಮ ಜೊತೆಗೆ 1983ರಲ್ಲಿ ಈ ಸಭೆಯ ಸದಸ್ಯರಾಗಿ ಬಂದರು. ಅವರು ಅದಕ್ಕಿಂತಲೂ ಮೊದಲೇ ರಾಮನಗರ ತಾಲ್ಲೂಕಿನಲ್ಲಿ ಬಡವರ ಪರವಾಗಿ ಹೋರಾಟವನ್ನು ಮಾಡಿದಂತಹವರು, ಬಡವರು ಎಂದರೆ ಎಲ್ಲಾ ಜಾತಿಯ ಬಡವರ ಪರವಾಗಿ ಹೋರಾಟ ಮಾಡಿದಂತಹ ವ್ಯಕ್ತಿಯಾಗಿದ್ದರು. ಪರಿಶಿಷ್ಟ ಜಾತಿ ಮತ್ತು ವರ್ಗದವರ ಏಳಿಗೆಗೋಸ್ಕರವೂ ದುಡಿದಿದ್ದಾರೆ, ಗ್ರಾಮೀಣ ಪ್ರದೇಶದ ಜನರಿಗೆ ದುಡಿದು ಶಾಸಕರಾಗಿ ಬಂದು ಬಹಳ ನಿಷ್ಠಾವಂತರಾಗಿ ಕೆಲಸವನ್ನು ಮಾಡಿದ್ದಾರೆ. ನಂತರ ಅವರ ಸೇವೆಯನ್ನು ಗುರುತಿಸಿ ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ಅವರನ್ನು ವಿಧಾನಪರಿಷತ್ತಿಗೂ ಸಹ ಆಯ್ಕೆ ಮಾಡಿದ್ದರು. ಶ್ರೀಯುತರಿಗೆ ವಯಸ್ಸಾಗಿತ್ತು. ಬಹಳ ವಯಸ್ಸಾದ ಮೇಲೂ ತುಂಬಾ ಕಷ್ಟದಲ್ಲಿ ವಿಧಾನಪರಿಷತ್ತಿಗೆ ಬರುತ್ತಿದ್ದರು. ಆದರೆ ಅವರು ಯಾವ ವರ್ಗದಿಂದಲೂ ದ್ವೇಷವನ್ನು ಕಟ್ಟಿಕೊಂಡಿರಲಿಲ್ಲ. ಬಹಳ ಸ್ನೇಹಜೀವಿಗಳಾಗಿದ್ದರು. ಸೌಜನ್ಯ ಶೀಲ ವ್ಯಕ್ತಿಯಾಗಿದ್ದರು. ಅವರ ಒಂದು ಅವಧಿ ಮುಗಿದು ಕೇವಲ ಮೂರು ದಿನಗಳಾಗಿದೆ. ಶ್ರೀಯುತರು 5ನೇ ತಾರೀಖು ರಾಜ್ಯಪಾಲರ ಜಂಟಿ ಅಧಿವೇಶನದಲ್ಲಿ ಭಾಗವಹಿಸಿ ನಿವೃತ್ತರಾಗಿ ಮನೆಗೆ ಹೋದ ಮೇಲೆ ಎರಡು ಮೂರು ದಿನದಲ್ಲಿ ಮೃತರಾಗಿರತಕ್ಕಂಥದ್ದು ನೋಡಿದರೆ ಬಹಳ ಹಚ್ಚಿಕೊಂಡಿದ್ದಂತೆ ಕಾಣಿಸುತ್ತದೆ. ಅವರ ಮನಸ್ಸಿನಲ್ಲಿ ಈ ಒಂದು ಜನರ ಸೇವೆಯನ್ನು ಮಾಡುವಂತಹ ಅವಕಾಶ ಈ ಒಂದು ರೀತಿಯಲ್ಲಿ ತಪ್ಪಿತಲ್ಲಾ ಎಂದು ಹೇಳಿ ಬಹಳ ನೋವಾಗಿ ಬಹುಶಃ ಹೀಗೆ ಆಗಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಯುತರಿಗೆ ವಯಸ್ಸಾಗಿದ್ದರೂ ಅವರ ನಿಧನದಿಂದಾಗಿ ನಮ್ಮ ಜನತಾಪರಿವಾರದ ಸಂಘಟನೆಗಳಿಗೆ ಮತ್ತು ರಾಮನಗರ ಕ್ಷೇತ್ರದ ಜನತೆಗೆ ಬಹಳ ತುಂಬಲಾರದ ನಷ್ಟವಾಗಿದೆ. ಅವರ ನಿಧನದಿಂದಾಗಿರುವ ದುಃಖವನ್ನು ಭರಿಸಲು ಅವರ ಕುಟುಂಬದವರಿಗೆ ಭಗವಂತನು ಶಕ್ತಿಯನ್ನು ಕೊಡಲಿ ಮತ್ತು ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ) : ಮಾನ್ಯ ಸಭಾಧ್ಯಕ್ಷರೆ, ಈ ಸದನದ ಒಬ್ಬ ಸದಸ್ಯರಾಗಿದ್ದಂತಹ ಕಳೆದ ಬಾರಿಯೂ ವಿಧಾನಪರಿಷತ್ತಿನ ಸದಸ್ಯರಾಗಿದ್ದಂತಹ ರೈತರ ಮುಖಂಡರಾದ ಶ್ರೀಮಾನ್ ಸಿ. ಬೋರಯ್ಯನವರ ನಿಧನ ನಮಗೆಲ್ಲರಿಗೂ ಸಹಿತ ದುಃಖವನ್ನುಂಟು ಮಾಡಿದೆ. ಅದರಲ್ಲೂ ವಿಶೇಷವಾಗಿ ನನ್ನ ರಾಜಕೀಯ ಬೆಳವಣಿಗೆಗೆ ಮಾನ್ಯ ಬೋರಯ್ಯನವರ ಆಶೀರ್ವಾದ ಬಹಳ ಮಹತ್ತರವಾದುದು. 1973–74ನೇ ಇಸವಿಯಲ್ಲಿ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಜಯಪ್ರಕಾಶ್‌ನಾರಾಯಣರವರ ನೇತೃತ್ವದಲ್ಲಿ ಆಂದೋಳನ ಪ್ರಾರಂಭವಾದಂತಹ ಸಂದರ್ಭದಲ್ಲಿ ಮಾನ್ಯ ಬೋರಯ್ಯನವರು ಚನ್ನಪಟ್ಟಣ ಬಿ.ಜೆ.ಲಿಂಗೇಗೌಡರು ಸರ್ಜಾಪುರದ ವೆಂಕಟರಮಣವರು ಇವರೆಲ್ಲರೂ ಸಹಿತ ಸಂಸ್ಥಾ ಕಾಂಗ್ರೆಸ್‌ನಲ್ಲಿದ್ದು ಬಹಳ ನಿಷ್ಠೆಯಿಂದ ಕೆಲಸ ಮಾಡಿದವರು. ಇವರುಗಳೆಲ್ಲರೂ ಮೂಲತಃ ಕಾಂಗ್ರೆಸ್ಸಿಗರಾಗಿದ್ದರು. 1969ರ ಒಡಕಿನ ನಂತರ ಸಂಸ್ಥಾ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡು 1969ರಿಂದ ಇದುವರೆವಿಗೂ ಸಹಿತ ಸಾಯುವ ಕೊನೆಯ ಉಸಿರಿರುವ ತನಕ

ಅವರು ಇಂದಿರಾ ಕಾಂಗ್ರೆಸ್‌ನ್ನು ವಿರೋಧ ಮಾಡಿ ರಾಜಕೀಯವನ್ನು ಮಾಡಿದಂತಹ ಒಬ್ಬ ಮುಖಂಡರು. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ವಿಶೇಷವಾಗಿ ಅದರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ದುಡಿದಂತಹ ಒಬ್ಬ ಮುಖಂಡರಾಗಿದ್ದರು. ಶಿಕ್ಷಣ ಸಂಸ್ಥೆಯನ್ನು ಕಟ್ಟಿ, ಅದರ ಅಧ್ಯಕ್ಷರಾಗಿ ರಾಮನಗರ ತಾಲ್ಲೂಕಿನಲ್ಲಿ ಅದರಲ್ಲೂ ವಿಶೇಷವಾಗಿ ಬಿಡದಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಶಿಕ್ಷಣವನ್ನು ಬಡವರಿಗೆ ಮತ್ತು ಸಾಮಾನ್ಯ ಜನಗಳಿಗೆ ಕೊಡುವಂತಹ ದೃಷ್ಟಿಯಿಂದ ಬಹಳ ಪ್ರಾಮಾಣಿಕವಾಗಿ ಸೇವೆಯನ್ನು ಸಲ್ಲಿಸಿದಂತಹ ಒಬ್ಬ ಮಹಾನ್‌ಭಾವರಾಗಿದ್ದಾರೆ. ಜೊತೆಗೆ 1980ರ ಸುಮಾರಿನಲ್ಲಿ ರಾಜ್ಯದಲ್ಲಿ ರೈತರ ಹೋರಾಟ ಪ್ರಾರಂಭವಾದಂತಹ ಸಂದರ್ಭದಲ್ಲಿ ರೈತ ಚಳುವಳಿಯಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿ, 1983ರಲ್ಲಿ ಅದರ ಪರಿಣಾಮವಾಗಿ ರಾಮನಗರ ಕ್ಷೇತ್ರದಿಂದ ಗೆದ್ದು ಬಂದಿದ್ದರು. ಇವತ್ತಿನ ರಾಮನಗರ ಕ್ಷೇತ್ರದ ಸದಸ್ಯರಾದಂತಹ ಶ್ರೀ ಸಿ.ಎಂ. ಲಿಂಗಪ್ಪನವರು ಮತ್ತು ಬೋರಯ್ಯನವರು ಬಹಳ ಹತ್ತಿರದ ರಕ್ತಸಂಬಂಧಿಗಳು. ಆದರೆ ಆ ರಕ್ತಸಂಬಂಧ ಯಾವತ್ತಿಗೂ ಸಹಿತ ಪಕ್ಷದ ನಿಷ್ಠೆಗೆ ಧಕ್ಕೆಯನ್ನು ತಂದಿರಲಿಲ್ಲ. ಅವರು ಎಷ್ಟೇ ಹತ್ತಿರ ಸಂಬಂಧವಿದ್ದರೂ, ಒಂದೇ ಊರಿನವರಾಗಿದ್ದರೂ ಸಹಿತ ಬೋರಯ್ಯನವರು ಬಹಳ ಪ್ರಾಮಾಣಿಕವಾಗಿ ವಿರೋಧಪಕ್ಷದಲ್ಲಿ ಕೆಲಸವನ್ನು ಮಾಡಿದಂತವರಾಗಿದ್ದರು. ಅವರನ್ನು ನಾವು ಕಳೆದ ಸಾರಿ ವಿಧಾನಪರಿಷತ್ತಿನ ಕ್ಷೇತ್ರದಿಂದ ಅವರನ್ನು ನಾವು ವಿಧಾನಪರಿಷತ್ತಿಗೆ ಆಯ್ಕೆಯನ್ನು ಮಾಡಿದ್ದೆವು. ಶ್ರೀಯುತರು ರೈತರ ಬಗ್ಗೆ ಬಹಳ ಕಾಳಜಿಯನ್ನಿಟ್ಟುಕೊಂಡಿದ್ದ ಮನುಷ್ಯರಾಗಿದ್ದರು. ಬಹಳ ಮುಗ್ಧ ಸ್ವಭಾವದವರಾಗಿದ್ದರು. ರೈತರಿಗೆ ಸಾಮಾನ್ಯವಾಗಿ ಸುಳ್ಳು ಕಪಟತನ, ಮೋಸಗಾರಿಕೆ ಇಂತಹ ಗುಣಗಳು ಇರುವುದಿಲ್ಲ. ಅಂತಹ ಒಂದು ಜಾತಿಗೆ ಸೇರಿದಂತಹ ಶ್ರೀ ಬೋರಯ್ಯನವರು ಅಪಾರವಾದಂತಹ ಬೆಂಬಲವನ್ನು ನಮ್ಮ ಜಿಲ್ಲೆಯಲ್ಲಿ ಗಳಿಸಿದ್ದರು. ಶ್ರೀ ಕೆಂಗಲ್ ಹನುಮಂತಯ್ಯನವರ ಕೈಕೆಳಗೆ ಕೆಲಸ ಮಾಡಿದಂತಹ ಬೋರಯ್ಯನವರು ಅಲ್ಲಿಯ ಕೆಂಗಲ್ ಹನುಮಂತನ ದೇವಸ್ಥಾನದ ಟ್ರಸ್ಟ್ ಏನಿದೆ, ಅಲ್ಲಿಯೂ ಸಹಿತ ಅವರು ಅದರ ಅಭಿವೃದ್ಧಿಗೋಸ್ಕರ ಎಂದು ಹೇಳಿ ಕೆಲಸ ಮಾಡಿದಂತಹ ಮುಖಂಡರಾಗಿದ್ದಾರೆ. ಕಾಲಭೈರವೇಶ್ವರ ಶಿಕ್ಷಣಸಂಸ್ಥೆಯನ್ನು ಕಟ್ಟಿ ಅಲ್ಲಿ ಸಹಿತ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರು. ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ, ರೈತರ ಚಳುವಳಿಯಲ್ಲಿಯೂ ಭಾಗವಹಿಸಿದ್ದರು, ಅವರ ಆರೋಗ್ಯ ಕಳೆದ 3–4 ವರ್ಷಗಳಿಂದ ಚೆನ್ನಾಗಿರಲಿಲ್ಲ. ಅವರ ಆರೋಗ್ಯ ಸರಿಯಿಲ್ಲದಿದ್ದರೂ ಸಹಿತ ಅವರು ರೈತರ ವಿಚಾರ ಬಂದಾಗ ಸ್ಪಂದಿಸತಕ್ಕಂತಹ ಕೆಲಸವನ್ನು ಮಾಡುತ್ತಿದ್ದರು. ನನಗೆ ವೈಯಕ್ತಿಕವಾದಂತಹ ಸಂಬಂಧ ಬೋರಯ್ಯನವರ ಜೊತೆಯಲ್ಲಿ ಬಹಳ ಹತ್ತಿರದ ಸಂಬಂಧವಿದೆ. ಕಳೆದ 25ವರ್ಷಗಳಲ್ಲಿ ನಮ್ಮ ಮನೆಯಲ್ಲಿ ನಾವು ಯಾವತ್ತೂ ಅವರ ಮನೆಯ ಬೆಲ್ಲ ಇಲ್ಲದೆ ಯುಗಾದಿ ಹಬ್ಬವನ್ನು ಮಾಡಿರಲಿಲ್ಲ. ಪ್ರತಿ ನಿತ್ಯವೂ ಸಹಿತ ಅವರು ನಮ್ಮನ್ನು ನೆನೆಸಿಕೊಳ್ಳುತ್ತಿದ್ದರು, ನಾವು ಅವರನ್ನು ನೆನಸಿಕೊಳ್ಳುತ್ತಿದ್ದೆವು, ಈ ತರಹ ಒಂದು ಬಾಂಧವ್ಯವಿತ್ತು. ಬೋರಯ್ಯನವರು ಒಬ್ಬ ನಿಷ್ಠಾವಂತ ರಾಜಕಾರಣಿಗಳಾಗಿದ್ದರು, ಅವರ ನಿಧನದಿಂದ ನಮ್ಮ ಜಿಲ್ಲೆಗೆ, ರಾಮನಗರ ತಾಲ್ಲೂಕಿಗೆ ಬಹಳ ನಷ್ಟವಾಗಿದೆ. ನನಗೂ ವೈಯುಕ್ತಿಕವಾಗಿ ನಷ್ಟವಾಗಿದೆ ನೋವುಂಟು ಮಾಡಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹೇಳಿ ನಾನು ಈ ಸಂದರ್ಭದಲ್ಲಿ ಭಗವಂತನಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ. ಶ್ರೀಯುತರ ಅಂತ್ಯಕ್ರಿಯೆ ಇನ್ನೂ ಮುಗಿದಿಲ್ಲ, ನಾನು ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಹೊರಟಿದ್ದೇನೆ. ಅವರ ಕುಟುಂಬವರ್ಗದವರಿಗೆ ಈ ಒಂದು ದುಃಖವನ್ನು ಭರಿಸುವುದಕ್ಕೆ ಭಗವಂತ ಶಕ್ತಿ ಕೊಡಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆಯನ್ನು

ಮಾಡಿ ತಾವು ಮಂಡಿಸಿರತಕ್ಕಂತಹ ಈ ಸಂತಾಪ ಸೂಚನೆಯಲ್ಲಿ ಸಹಮತಿಯನ್ನು ಸೂಚಿಸುವುದರ ಜೊತೆಗೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಧನ್ಯವಾದಗಳು.

ಅಧ್ಯಕ್ಷರು : ದಿವಂಗತರಾದ ಶ್ರೀ ಸಿ.ಬೋರಯ್ಯರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷಗಳ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2) ವಿಷಯ:– ಥಾಪಾ ಕಾಗದದ ಹಗರಣದ ಚರ್ಚೆಗೆ ಸಂಬಂಧಪಟ್ಟಂತೆ

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಧರಣಿಯನ್ನು ನಡೆಸಲು ಸದನದ ಬಾವಿಗೆ ಬಂದರು)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):– ಮಾನ್ಯ ಅಧ್ಯಕ್ಷರೆ, ನಿನ್ನೆ ಇಲ್ಲಿ ಮಾನ್ಯ ಮಂತ್ರಿಗಳು ದೀರ್ಘವಾದ ಉತ್ತರವನ್ನು ಕೊಟ್ಟರು. ಮಾನ್ಯ ರೋಷನ್‌ಬೇಗ್‌ರವರು ಹಜ್‌ಗೆ ಹೋಗಿರುವ ಬಗ್ಗೆ ಎಲ್ಲಾ ಮಾಹಿತಿ ಕೊಟ್ಟಿದ್ದಾರೆ. ನನಗೆ ಬಂದಂತಹ ಖಚಿತವಾದಂತಹ ಮಾಹಿತಿಯನ್ನು ಸರ್ಕಾರದ ಮೂಲಕ ಸ್ಟಾಂಪಿಟ್‌ಗೂ ಹಾಗೂ ಸರ್ಕಾರಕ್ಕೂ ಕೊಡುತ್ತೇನೆ. ಮಾನ್ಯ ರೋಷನ್‌ಬೇಗ್‌ರವರ ವ್ಯವಹಾರಗಳನ್ನು ಅನೇಕ ಸಂಗತಿಗಳನ್ನು ನೋಡಿಕೊಳ್ಳುತ್ತಿದ್ದ ಬೆಂಗಳೂರು ಮಹಾನಗರಪಾಲಿಕೆಯ ಒಬ್ಬ ಕಾರ್ಪೊರೇಟರ್ ಕಳೆದ 8 ದಿವಸದಿಂದ ಅವರನ್ನೂ ಸಹ ಪೊಲೀಸ್‌ನವರು ಹುಡುಕುತ್ತಿದ್ದರು ಅವರು ಅಬ್‌ಸ್ಕಾಂಡ್ ಆಗಿದ್ದಾರೆ. ಶ್ರೀ ರೋಷನ್‌ಬೇಗ್‌ರವರ ಎಲ್ಲಾ ಟ್ರಾನ್ಸ್‌ಜಕ್ಷನ್‌ನ್ನು ಅವರೇ ನೋಡಿಕೊಳ್ಳುತ್ತಿದ್ದರು. ಇವರು ಭಾರತವನ್ನು ಬಿಟ್ಟು ಓಡಿಹೋಗಿದ್ದಾರೆ. ಆ ಬೆಂಗಳೂರು ಮಹಾನಗರಪಾಲಿಕೆಯ ಸದಸ್ಯರನ್ನಾದರೂ ಕೂಡ ತಾವು ಹಿಡಿದು ತಮ್ಮ ಪ್ರಾಮಾಣಿಕತೆಯನ್ನು ತೋರಿಸುತ್ತೀರಾ? ಅದರ ಬಗ್ಗೆಯಾದರೂ ಕೂಡ ಉತ್ತರವನ್ನು ಕೊಡಿ.

ಅಧ್ಯಕ್ಷರು : ಈ ವಿಷಯ ನಿನ್ನೆಗೆ ಮುಗಿದಿದೆ, ಅದಕ್ಕೆ ಉತ್ತರ ಮತ್ತೆ ಹೇಳಬೇಕಾಗಿಲ್ಲ. ನಿನ್ನೇ ಮುಕ್ತಾಯವಾಗಿದೆ.

†ಶ್ರೀ ಬಿ. ಸೋಮಶೇಖರ್(ಮಳವಳ್ಳಿ) : ನಮ್ಮ ಪಕ್ಷದವರು ಸರ್ಕಾರದವರ ಮುಂದೆ ಅನೇಕ ಪ್ರಮುಖವಾದ ಪ್ರಶ್ನೆಗಳನ್ನು ಇಟ್ಟಿದ್ದೆವು. ಸದನದ ಕಲಾಪವನ್ನು ನಡೆಯದಂತೆ ಅಡ್ಡಿಪಡಿಸುವುದು ನಮ್ಮ ಉದ್ದೇಶವಲ್ಲ, ಸದನ ಯಾವಾಗಲೂ ನಿರಂತರವಾಗಿ ನಡೆದು ಮುಕ್ತ ಚರ್ಚೆಯಾಗಬೇಕು ಎಂಬುದು ನಮ್ಮ ಉದ್ದೇಶ. ನಾವು ಪ್ರಮುಖವಾದ ಪ್ರಶ್ನೆಗಳನ್ನು ಕೇಳಿದ್ದೆವು. ಆದರೆ ಇದಕ್ಕೆ ಸರ್ಕಾರದಿಂದ ಯಾವುದೇ ಉತ್ತರವಿಲ್ಲ. ಅವರು ಒಂದು ಪುಸ್ತಕವನ್ನು ಕೊಟ್ಟು ಉತ್ತರವನ್ನು ಓದಿದರು. ಅದರಲ್ಲಿ ಕೇಂದ್ರಸರ್ಕಾರಕ್ಕೆ, ಮಾನ್ಯಮುಖ್ಯಮಂತ್ರಿಗಳು, ಗೃಹಮಂತ್ರಿಗಳು ಬರೆದಂತಹ ಪತ್ರಗಳನ್ನು ಬಿಟ್ಟರೆ ಬೇರೆ ಯಾವುದೇ ವಿಚಾರಗಳಿಲ್ಲ. ರಾಜ್ಯ ಸರ್ಕಾರಕ್ಕೂ ಕೇಂದ್ರ ಸರ್ಕಾರಕ್ಕೂ ನಡುವೆ ನಡೆದಿರುವ 2–3 ಪತ್ರಗಳ ವಿಶ್ಲೇಷಣೆ ಬಿಟ್ಟರೆ ಬೇರೆ ಯಾವುದೇ ವಿರೋಧಪಕ್ಷದವರು ಎತ್ತಿದಂತಹ ವಿಚಾರಗಳಿಗೆ ಯಾವುದೇ ಉತ್ತರವಿಲ್ಲ. ನಾವು ಮೊದಲಿಗೆ ಮಾನ್ಯ ರೋಷನ್‌ಬೇಗ್ ಅವರ ರಾಜೀನಾಮೆ ಬಗ್ಗೆ ಕೇಳಿದಾಗ ನೀವು 2–3 ವರ್ಷಗಳಿಂದ ರಾಜೀನಾಮೆ ಕೊಡುವ ಅವಶ್ಯಕತೆಯಿಲ್ಲ, ಅವರು ತಪ್ಪಿತಸ್ಥರಲ್ಲ ಅಂತ ಹೇಳುತ್ತಿದ್ದು ತಕ್ಷಣ ವಿಧಾನಸಭೆ ಅಧಿವೇಶನ ಪ್ರಾರಂಭವಾಗುವ ಹಿಂದಿನ ದಿನ ರಾಜೀನಾಮೆ